ಅವಾಯ್ಡ್ ಮಾಡೋಕೆ ಹಾಗೆ ಹೇಳುತ್ತಿದ್ದಳೋ ಅಥವಾ ಕುರುಕ್ಷೇತ್ರ ಅವಾಯ್ಡ್ ಮಾಡೋಕೆ ಹೇಳುತ್ತಿದ್ದಳೋ ಗೊತ್ತಿಲ್ಲ.

ನನ್ನ ಕಣ್ಣುಗಳಿಂದ ನೀರು ಹನಿಯುತ್ತಿತ್ತು. ಹೌದು... ಅಜ್ಜಿ ಏನೆಲ್ಲ ಮಾಡಿದಳಲ್ಲ. ನನ್ನ ಮದುವೆಗೆ ಹಣ ಸಾಲದೇ ಬಂದಾಗ ತನ್ನ ಬಳಿ ಇದ್ದ ಹಣವನ್ನು ನನಗೆ ಕೊಟ್ಟಿದ್ದಳು. ಅತ್ತಿಗೆ ಹೇಳಿದ್ದಳು 'ಅತ್ತೆ... ನೀನು ಕೊಡಬೇಡ. ಅದು ನಮ್ಮ ಜವಾಬ್ದಾರಿ. ನಾವು ನೋಡಿಕೊಳ್ತೀವಿ' ಅಂತ. ಅಜ್ಜಿ ಹೇಳಿದ್ದಳು 'ಜವಾಬ್ದಾರಿ ಅಂತ ಯಾರದ್ದೂ ಇರಲ್ಲ ಕಣೇ. ಅದು ಸುಮ್ಮನೆ ನಮ್ಮ ನಮ್ಮ ಸಂತೋಷಕ್ಕೆ ನಾವು ಹೇಳಿಕೊಳ್ಳೋದು. ಎಲ್ಲ ಜವಾಬ್ದಾರಿ ಆ ಶಿವನದೇ. ಅವನು ಕೊಡು ಅಂದ ನಾನು ಕೊಡ್ತಾ ಇದ್ದೀನಿ ಅಷ್ಟೆ. ಮತ್ತೆ ಕೊಡುತ್ತಿರುವುದಾದರೂ ಯಾಕೆ... ಮಂಗಳ ಕಾರ್ಯಕ್ಕೇ ಅಲ್ಲವೇ!' ಅವತ್ತು ಅಮ್ಮ ಕೂಡ ಸ್ವಲ್ಪ ವಿಚಲಿತರಾಗಿದ್ದರು... 'ಹೀಗೂ ಯಾರಾದರೂ ಇರ್ತಾರೇನೇ?' ಅಂತ ನನ್ನನ್ನು ಕೇಳಿದ್ದರು. ನಾನು ಉತ್ತರಿಸಿರಲಿಲ್ಲ. ಆದರೆ ಅಮ್ಮನ ತಿಳಿವಳಿಕೆಗಳಿಗೆಲ್ಲ ಆಯುಸ್ಸು ಕಡಿಮೆ ಎಂಬುದು ನನಗೆ ಗೊತ್ತಿತ್ತು.

ನನ್ನ ಮದುವೆ ಆದ ನಂತರ ದೆಹಲಿಗೆ ಹೊರಡುವ ಮೊದಲು ಶೇಷಜ್ಜಿಗೆ ನಮಸ್ಕಾರ ಮಾಡಲು ಹೋದೆ. ಆಗ ಅಮ್ಮ, 'ಅವಳಿಗ್ಯಾಕೆ ಮಾಡ್ತೀಯ. ದೂರದಿಂದ ಹೇಳು ಸಾಕು. ನೀನು ಬಾಳಿ ಬದುಕಬೇಕಾದವಳು' ಅಂದಳು. ನಾನು ಅಸಹನೆಯಿಂದ ಹೇಳಿದ್ದೆ, 'ಅವಳು ಕೊಟ್ಟ ದುಡ್ಡಲ್ಲಿ ಮದುವೆ ಮಾಡಿದ್ರೆ ಬಾಳಿ ಬದುಕಬಹುದು. ನಮಸ್ಕಾರ ಮಾಡಿದ್ರೆ ಆಗಲ್ಲ ಅಲ್ವ?' ಕಟುವಾಗಿ ನುಡಿದು ಶೇಷಜ್ಜಿ ಹತ್ತಿರ ಹೋಗಿದ್ದೆ. ನನಗೆ ಅಮ್ಮನ್ನ ಬಿಟ್ಟು ಹೋಗುತ್ತಿದ್ದೀನಿ ಅಂತ ಚಿಂತೆನೇ ಇರಲಿಲ್ಲ. ಆದರೆ... ಅಜ್ಜಿ... ಇಲ್ಲದೆ... ಆಕೆಯನ್ನು ಬಿಟ್ಟು ನನ್ನ ಜೀವನವೇ ವ್ಯರ್ಥ ಅನ್ನಿಸಿಬಿಟ್ಟಿತ್ತು. ಅತ್ತಿಗೆ ನನಗೆ ಹೊಸ ರೀತಿಯ ವಿಚಾರಧಾರೆಗಳನ್ನು ನೀಡಿದ್ದರೆ, ಅಜ್ಜಿ ನನ್ನ ಮನಸ್ಸಿನ ದೂಳನ್ನೆಲ್ಲ ತೊಳೆದು ಶುಭ್ರ ಮಾಡಿದ್ದಾಳೆ ಅನ್ನಿಸುತ್ತಿತ್ತು. ಅವಳ ಹತ್ತಿರ ಹೋಗಿ ಮಾತಾಡಿ ಬಂದರೆ ಸಾಕು, ಮನಸ್ಸೆಲ್ಲ ಒಂದು ರೀತಿ ಗಂಗೆಯಲ್ಲಿ ಸ್ನಾನ ಮಾಡಿದಂತೆ ಅನ್ನಿಸುತ್ತಿತ್ತು. ಅಜ್ಜೀನೂ ಕರಕೊಂಡು ಹೋಗೋಣ ಅಂತ ಇವರ ಹತ್ತಿರ ಅಲವತ್ತುಕೊಂಡಿದ್ದೆ... ಆದರೆ ಆಗಿನ್ನೂ ಮದುವೆ ಆದ ಹೊಸತು. ಅಷ್ಟಾಗಿ ಮಾತನಾಡಲು ಆಗುತ್ತಿರಲಿಲ್ಲ. ಇವರಿಗಾದರೂ ಈ ಸಂಬಂಧ ಹೇಗೆ ಗೊತ್ತಾಗಬೇಕು? ಆದರೆ ಅಜ್ಜಿ ಹೇಳಿದ್ದಳು, 'ನನಗ್ಯಾಕೇ ನಮಸ್ಕಾರ. ನನ್ನ ಆಶೀರ್ವಾದ ಯಾವಾಗಲೂ ಇರುತ್ತೆ. ಚೆನ್ನಾಗಿರು. ಸ್ವಲ್ಪ ಸಹನೆ ಕಲಿ ಅಷ್ಟೆ ನಾನು ಹೇಳೋದು'. ಇವರಿಗೂ ಹೇಳಿದ್ದಳು 'ಪುಟ್ಟಿಗೆ ಸಹನೆ ಸ್ವಲ್ಪ ಕಡಿಮೆ. ಅನುಸರಿಸಿಕೊಳ್ಳಿ' ಅಂತ. ನಾನು ಇನ್ನೂ ಅದನ್ನು ಕಲಿಯಲೇ ಇಲ್ಲ ಅನ್ನಿಸುತ್ತೆ.

ಒಂದು ದಿನ ಶೇಷಜ್ಜಿಗೆ ಅಮ್ಮ ಅದೂ ಇದೂ ಕೆಲಸ ಹೇಳುತ್ತಲೇ ಇದ್ದಳು. ಅವಳೂ ಮಾಡುತ್ತಲೇ ಇದ್ದಳು. ಅಡುಗೇ ಮನೆ ಅಟ್ಟ, ಬಚ್ಚಲು ಮನೆ ಅಟ್ಟ ಎಲ್ಲ ಸ್ವಚ್ಛ ಮಾಡಿ ಅಲ್ಲಿದ್ದ ಹಿತ್ತಾಳೆ, ತಾಮ್ರದ ಪಾತ್ರೆಗಳನ್ನೆಲ್ಲ ಚೆನ್ನಾಗಿ ಉಜ್ಜಿ ಉಜ್ಜಿ ಥಳ ಥಳನೆ ಹೊಳೆಯುವಂತೆ ತೊಳೆದು ಜೋಡಿಸಿ ಅಲ್ಲೇ ಕೆಳಗಿಟ್ಟಿದ್ದಳು. ಆ ಸಮಯದಲ್ಲೇ ನನ್ನ ಗೆಳತಿಯೊಬ್ಬಳು ಬಂದಿದ್ದಳು. ಥಳ ಥಳ ಹೊಳೆಯುತ್ತಿದ್ದ ಆ ದೊಡ್ಡ ದೊಡ್ಡ ಹಂಡೆಯಂತಹ ಪಾತ್ರೆಗಳನ್ನು ಕಣ್ಣರಳಿಸಿ ನೋಡುತ್ತಾ 'ಎಷ್ಟು ಚೆನ್ನಾಗಿದೆಯೇ' ಅಂತ ಹೇಳಿದಳು. ಆಗ ನಾನು 'ನಮ್ಮ ಶೇಷಜ್ಜಿ ಕೈಯಲ್ಲಿ ಒಂದು ಸಾಮಾನು ಸಿಕ್ಕರೆ ಸಾಕು. ಕೊಳೆ ಎಲ್ಲ ಅದು ಕಳೆದುಕೊಂಡು ಥಳ ಥಳ ಹೊಳೆಯುತ್ತೆ ಗೊತ್ತಾ...' ಎಂದು ಜಂಭದಿಂದ ನುಡಿದೆ. ಆಗ ಅಲ್ಲೇ ಇದ್ದ ಶೇಷಜ್ಜಿ, 'ಈ ಹುಡುಗೀಗೆ ಶೇಷಜ್ಜಿ ಅಂದರೆ ಆಯ್ತು. ಸಣ್ಣದ್ದೂ ದೊಡ್ಡದಾಗಿ ಕಾಣುತ್ತೆ' ಅಂತ ಬಾಯಿತುಂಬ ನಕ್ಕರು. ಎಲ್ಲಿತ್ತೋ